ಒಣಗಿದ ರೊಟ್ಟಿಗಳು, ತಿಂದು ಉಳಿಸಿದ ಬಿಸ್ಕತ್ತಿನ ಪೊಟ್ಟಣ, ರಕ್ತಮಯವಾಗಿದ್ದ ಒಂದೆರೆಡು ನೋಟುಗಳು, ಮಗುವಿನ ಕುಲಾವಿ, ಒಂದೆರೆಡು ಹರಿದ ಸೀರೆ ಮತ್ತು ರವಿಕೆ ಮಾತ್ರ ಇದ್ದವು. ಇಂಥ ಅಮೂಲ್ಯವಾದ ಸಕಲ ಆಸ್ತಿಗಳನ್ನೂ ಬಿಟ್ಟು ಅವರು ಇಹಲೋಕ ತ್ಯಜಿಸಿದ್ದರು! ಹಳಿಗೆ ಹತ್ತಿರದಲ್ಲೇ ಭದ್ರವಾಗಿ ಮುಚ್ಚಿದ್ದ ಒಂದು ಡಬ್ಬಿಯೊಂದು ಬಿದ್ದಿತ್ತು. ಆ ಡಬ್ಬಿಯ ಮೇಲೆ ಮೃತ್ಯು ಕುಳಿತಿತ್ತು. ರೇವತಿ ಡಬ್ಬಿಯತ್ತ ಹೋಗಿ ಕುತೂಹಲದಿಂದ ಅದನ್ನು ತೆರೆದಳು. ಮುಚ್ಚಳವನ್ನು ತೆರೆಯುತ್ತಿದ್ದಂತೆ ಅದರೊಳಗೆ ಇನ್ನೂ ಉಸಿರಾಡುತ್ತಿದ್ದ ಸತ್ತವರ ಜೀವಾತ್ಮಗಳು ನಕ್ಷತ್ರಗಳಾಗಿ ಆಗಸದೆಡೆಗೆ ಒಮ್ಮೆಲೆ ಹಾರಿಹೋಗಿ ಉಳಿದ ನಕ್ಷತ್ರ ಪುಂಜಗಳೊಂದಿಗೆ ಸೇರಿಕೊಂಡವು. ನಕ್ಷತ್ರಗಳು ಹಾರಿಹೋದ ದಿಕ್ಕನ್ನು ಬೆಕ್ಕಸಬೆರಗಾಗಿ ನೋಡುತ್ತಿದ್ದ ರೇವತಿ, ಆಕಾಶದಲ್ಲಿ ಅಸಂಖ್ಯ ನಕ್ಷತ್ರಗಳ ನಡುವೆ ಇನ್ನೊಂದು ನಕ್ಷತ್ರವಾಗಿ ಹೊಳೆಯುತ್ತಿದ್ದ ತನ್ನ ತಾಯಿ ಜಬೀನಾಳನ್ನು ಕಂಡಳು. ಅವಳ ಮುಖದಲ್ಲಿ ಆನಂದದ ಗೆರೆಯೊಂದು ಮೂಡಿತು.

ಹಳಿಯ ಪಕ್ಕದಲ್ಲೇ ಅಳುತ್ತಿದ್ದ ಮಗು ತೆವಳುತ್ತಾ ತನ್ನ ತಾಯಿ ಮಲಗಿದ್ದ ಬಳಿಗೆ ಬಂದಿತು. ಸ್ವರ್ಗದ ದೇವತೆಯಂತೆ ಮಲಗಿದ್ದ ತನ್ನ ತಾಯಿಯನ್ನು ಹಿಡಿದು ಅಲ್ಲಾಡಿಸಿತು. ಅವಳ ದೇಹದಿಂದ ಹರಿದ ನೆತ್ತರು ಮಗುವಿನ ಪುಟ್ಟ ಕೈಗೆ ಕೆಸರಿನಂತೆ ಮೆತ್ತಿಕೊಂಡಿತು. ಆ ದೃಶ್ಯವನ್ನು ನೋಡಲಾಗದೆ ನಾನು ಕಣ್ಣುಮುಚ್ಚಿಕೊಂಡೆ. ದೈವವಶಾತ್ ಅಂದು ರಾತ್ರಿ ಸುರಿದ ಮಳೆಯಿಂದಾಗಿ ಹರಿದ ರಕ್ತವೆಲ್ಲ ಕೊಚ್ಚಿಹೋಗಿ ಹಳಿ ಶುಭ್ರವಾಗಿತ್ತು. ಮಂಜು ಮುಸುಕಿದ ಆ ಕಗ್ಗತ್ತಲ ರಾತ್ರಿ ತನ್ನ ಕಣ್ಣುಮುಂದೆಯೇ ಮಡಿದ ನಿರ್ಭಾಗ್ಯರಿಗೆ ಶ್ರದ್ಧಾಂಜಲಿ ಸಲ್ಲಿಸಿ ಮರೆಯಾಗಿತ್ತು. ನಾನು ಮತ್ತೆ ಕಣ್ಣು ತೆರೆದಾಗ ಮಗು ಆ ಹಳಿಗಳ ಮೇಲೆ ಇಟ್ಟಾಡಿದ್ದ ರೊಟ್ಟಿಯ ಚೂರುಗಳನ್ನು ಆರಿಸಿಕೊಳ್ಳುತ್ತಿತ್ತು. ಹಗಲು ಒದ್ದೆಗಣ್ಣಾಗಿ ಇದೆಲ್ಲವನ್ನೂ ರೆಪ್ಪೆ ಮುಚ್ಚದೆ ಅಸಹಾಯಕವಾಗಿ ನೋಡುತ್ತಿತ್ತು. ನೋಡಿದರೆ ಎದೆಬಿರಿಯುವಂತಹ, ಸಹಿಸಿಕೊಳ್ಳಲೂ ಆಗದ ಇಂತಹ ಕೆಟ್ಟದಿನವನ್ನು ನೋಡುವ ಅವಕಾಶ ಮತ್ತೆ ಯಾರಿಗೂ ಬಾರದಿರಲಿ! ರೇವತಿಯನ್ನು ಬರಸೆಳೆದು ನನ್ನ ಒಡಲಿಗೆ ತುಂಬಿಕೊಂಡೆ.

ಅಲ್ಲಿ ಹೆಪ್ಪುಗಟ್ಟಿದ್ದ ನೀರವತೆ ಒಮ್ಮೆಲೆ ಸಿಡಿಯಿತು. ಬೇಟೆ ನಾಯಿಗಳು ತಿಂದು ಬಿಟ್ಟುಹೋದ ಅರೆಬರೆ ದೇಹಗಳಂತೆ ಅಲ್ಲೆಲ್ಲಾ ವಿಕಾರವಾಗಿ ಬಿದ್ದಿದ್ದ ಹೆಣಗಳ ನಡುವಿನಿಂದ ನುಜ್ಜುಗುಜ್ಜಾಗಿದ್ದ ದೇಹವೊಂದು ತೂರಾಡುತ್ತಾ ಎದ್ದುನಿಂತಿತು. ಅದರ ತಲೆಯೊಡೆದು ದಾಸವಾಳದ ಹೂವಿನಂತಾಗಿತ್ತು. ತಲೆಯಿಂದ ಹರಿದ ರಕ್ತ ಮುಖವನ್ನು ಸಂಪೂರ್ಣವಾಗಿ ಮರೆಮಾಚಿತ್ತು. ಒಂದು ತೋಳು ಕಡಿದುಹೋಗಿ ಎರಡು ಪಾದಗಳೂ ಹಳಿಯ ಮೇಲೆ ಜಜ್ಜಿಹೋಗಿದ್ದವು. ಎರಡು ತೊಟ್ಟು ಕಣ್ಣೀರು ಅದರ ಕೆನ್ನೆಗಳ ಮೇಲೆ ಹಾಗೇ ಉಳಿದಿತ್ತು. ಅದನ್ನು ನೋಡಿದ ರೇವತಿ ಭಯದಿಂದ ನನ್ನನ್ನು ಮತ್ತಷ್ಟು ಬಿಗಿಯಾಗಿ ಆತುಕೊಂಡಳು. 'ಹೆದರಬೇಡ ಮಗು... ಅವನೂ ನನ್ನ ಜೊತೆಯಲ್ಲೇ ಕೂಲಿ ಮಾಡುತ್ತಿದ್ದವನು. ತನ್ನ ಹೆಂಡತಿ ಮತ್ತು ಶಾಲೆಗೆ ಹೋಗುತ್ತಿದ್ದ ನಿನ್ನದೇ ವಯಸ್ಸಿನ ಮಗಳ ಮುಖ ನೋಡಬೇಕು ಎಂದು ಇಡೀ ದಿನ ಹಂಬಲಿಸಿದ್ದ. ನೆನ್ನೆ ರಾತ್ರಿ ಇದೇ ದಾರಿಯಲ್ಲಿ ಹೊರಟವನು, ಈಗ ಲೋಕವನ್ನೇ ಬಿಟ್ಟು ಹೋಗಿದ್ದಾನೆ' ಎಂದು ಹೇಳಿ, ಬಿಸಿಲು ಮತ್ತು ದೂಳಿಗೆ ಒಣಗಿ ಸಿಕ್ಕಾದ ಅವಳ ಕೂದಲನ್ನು ನೇವರಿಸಿದೆ. ಅವಳು ಮೃದುವಾಗಿ ಕಣ್ಣುಮುಚ್ಚಿಕೊಂಡಳು. ಅವಳ ಮುಚ್ಚಿದ ರೆಪ್ಪೆಗಳ ನಡುವಿನಿಂದ ಕಣ್ಣೀರು ಇಬ್ಬನಿಯ ಮಣಿಯಂತೆ ಜಿನುಗಿತು.

ಚೆಲ್ಲಾಡಿದ್ದ ಶವಗಳನ್ನು ಎಡವುತ್ತಾ ಎರಡು ಹೆಜ್ಜೆ ಮುಂದೆ ಬಂದು, ಅಲ್ಲಿನ ಬಯಲನ್ನೇ ನಿಟ್ಟಿಸುತ್ತಾ ಅವನು ಹೇಳಿದ:

'ಕರುಣಾಳು ದೇವರು ನಮ್ಮನ್ನು ವಂಚಿಸಲಿಲ್ಲ!

ಸಾವು ಬಂದೆರಗುವವರೆಗೂ ನಾವು ನಿಮಗಾಗಿ ದುಡಿದೆವು. ನಾವು ದಿಕ್ಕೆಟ್ಟು ನಡೆವಾಗ